5C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 127/2022

ದಿನಾಂಕ ಃ 06.08.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 12 ಪಿ. ಡಬ್ಲ್ಯೂ:11

| | |
|---|---|
| ಸಾಕ್ಷಿದಾರರ ಹೆಸರು | ಮಹಮ್ಮದ್ ಖಾಸಿಮ್ ಅಲಿಯಾಸ್ ಜಿಯಾಉಲ್ಲಾ |
| ತಂದೆಯ ಹೆಸರು | ಮಹಬೂಬ್ ಆಲಿ |
| ವಯಸ್ಸು | 60 ವರ್ಷ |
| ಉದ್ಯೋಗ | ಮೆಡಿಕಲ್ ಸ್ಟೋರ್ ಮಾಲೀಕ |
| ವಾಸ | ಕಿರುಗಾವಲು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ಕಳೆದ 25 ವರುಷಳಿಂದ ಕಿರುಗಾವಲಿನಲ್ಲಿ ನ್ಯೂ ಭಾರತ್ ಮೆಡಿಕಲ್ ಸ್ಟೋರ್ ಹೆಸರಿನ ಮೆಡಿಕಲ್ ಸ್ಟೋರ್ ನ್ನು ನಡೆಸುತ್ತಿದ್ದೇನೆ. ಸಾಮಾನ್ಯವಾಗಿ ನಾನು ಸದರಿ ಮೆಡಿಕಲ್ ಸ್ಟೋರ್ ನಲ್ಲಿ ಇರುತ್ತೇನೆ, ನಾನು ಊಟಕ್ಕೆ ಹೋದ ಸಮಯದಲ್ಲಿ ನನ್ನ ಮಗ ಕಿಫಾಯತ್ ಉಲ್ಲಾ ಸದರಿ ಮೆಡಿಕಲ್ ಸ್ಟೋರ್ ನಲ್ಲಿ ಇರುತ್ತಾನೆ.
2. ನನ್ನ ಪ್ರಕಾರ, anxint ಮಾತ್ರೆಯನ್ನು tension ಅಥವಾ ನಿದ್ರೆ ಬಾರದ ಪಕ್ಷದಲ್ಲಿ ಸದರಿ ಮಾತ್ರೆಯನ್ನು ತೆಗೆದುಕೊಳ್ಳುತ್ತಾರೆ.
3. ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು, ಅವರು ಚಂದ್ರು ಅರಾಧ್ಯರವರಾಗಿರುತ್ತಾರೆ. ಅವರು ಕಿರುಗಾವಲಿನವರಾಗಿರುತ್ತಾರೆ. ಅವರು ಟೈಲರಿಂಗ್ ಕೆಲಸವನ್ನು ಮಾಡುತ್ತಾರೆ. ಸುಮಾರು 40 ರಿಂದ 50 ವರುಷಗಳಿಂದ ಆರೋಪಿ ಗೊತ್ತು. ಅವರು ನಮ್ಮ ಊರಿನವರಾದ್ದರಿಂದ ಹಾಗೂ ಅವರು ನಮ್ಮ ಪಕ್ಕದ ಬೀದಿಯವರಾದುದರಿಂದ ನನಗೆ ಗೊತ್ತು. ಆರೋಪಿಗೂ, ನನಗೂ ಯಾವುದೇ ವ್ಯವಹಾರವಿಲ್ಲ.
4. ನನ್ನ ಮಗ ನಮ್ಮ ಮೆಡಿಕಲ್ ಸ್ಟೋರ್ ನಲ್ಲಿ ಇದ್ದಾಗ, ಪೊಲೀಸರು ಬಂದಾಗ anxint ಮಾತ್ರೆಯನ್ನು ತಾನು ನೀಡಿಲ್ಲ, ತಮ್ಮ ತಂದೆ ನೀಡಿರಬಹುದು ಎಂದು ಹೇಳಿದ್ದರು. ಪೊಲೀಸರು ಬಂದ ವಿಚಾರವನ್ನು, ನನ್ನ ಮಗ ನನಗೆ ಹೇಳಿರುತ್ತಾರೆ. ಪೊಲೀಸರು ನಮ್ಮ

ಅಂಗಡಿಯ ಬಳಿ ಬರುವ ಸುಮಾರು 1 ತಿಂಗಳ ಮೊದಲು, ಆರೋಪಿಯನ್ನು ನಾನು ನೋಡಿದ್ದೇನೆ. ಮಾಮೂಲಿಯಾಗಿ ಆರೋಪಿಗೆ ಮೈಗ್ರೇನ್ ಇರುವುದರಿಂದ ಮಾತ್ರೆಗಾಗಿ ಅವರು ನಮ್ಮ ಅಂಗಡಿಗೆ ಬರುತ್ತಾರೆ. ಮೈಗ್ರೇನ್ ಗೆ ಮಾತ್ರೆ ತೆಗೆದುಕೊಂಡಿರುವುದು ಬಿಟ್ಟರೇ ಬೇರೆ ಮಾತ್ರೆ ತೆಗೆದುಕೊಂಡಿರುವುದು ನನಗೆ ನೆನಪಿಲ್ಲ. ಆರೋಪಿಯು ಹೇಳಿದ್ದರಿಂದ, ಅವರಿಗೆ ಮೈಗ್ರೇನ್ ಇದೆ ಎಂದು ನನಗೆ ಗೊತ್ತಾಗಿರುತ್ತದೆ. ಆರೋಪಿಗೆ anxint ಮಾತ್ರೆ ಕೊಟ್ಟಿದ್ದೇವೆಂದು ಊರಿನವರು ಹಾಗೂ ನನ್ನ ಮಗ ಹೇಳಿದರು, ಹಾಗಾಗಿ ಆರೋಪಿಯನ್ನು ನಮ್ಮ ಅಂಗಡಿಯ ಬಳಿ ಪೊಲೀಸರು ಕರೆತಂದಿದ್ದರು.

5. ಜಗದೀಶ್ ರವರ ತಾಯಿಯನ್ನು ಕೊಲೆ ಮಾಡಿದ್ದಾರೆ ಎಂದು ಊರಿನವರು ಹೇಳಿದ್ದರಿಂದ ನನಗೆ ಗೊತ್ತಾಗಿರುತ್ತದೆ. ಕೆಲವು ಜನ ಜಗದೀಶ್ ರವರ ತಾಯಿಯನ್ನು ಕಲ್ಲಿನಿಂದ ಹೊಡೆದಿದ್ದಾನೆ ಎಂದು, ಕೆಲವು ಜನ ಅವರಿಗೆ ಮಾತ್ರೆ ನೀಡಿದ್ದಾರೆ ಎಂದು ಹೇಳುತ್ತಿದ್ದರು. ಚಿನ್ನದ ಉದ್ದೇಶದಿಂದ ಜಗದೀಶ್ ರವರ ತಾಯಿಯನ್ನು ಸಾಯಿಸಲಾಗಿದೆ ಎಂದು ಊರಿನವರು ಹೇಳುತ್ತಿದ್ದರು.

6. ಮಳವಳ್ಳಿ ಪೊಲೀಸ್ ಠಾಣೆಗೆ ನನ್ನನ್ನು ಕರೆಯಿಸಿಕೊಂಡು ಘಟನೆಯ ಬಗ್ಗೆ ವಿಚಾರಿಸಿದ್ದರು. ಮಾತ್ರೆ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ, ಚಂದ್ರಶೇಖರ್ ರವರು ನಮ್ಮ ಅಂಗಡಿಗೆ ಬಂದು ಒಂದು ತಿಂಗಳಾಗಿರುತ್ತದೆ ಎಂದು ಹೇಳಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

7. ಜಗದೀಶ್ ರವರ ತಾಯಿ ಕೊಲೆಯಾಗುವುದಕ್ಕೆ 15 ದಿನ ಮೊದಲು, ಆರೋಪಿಯು ನಮ್ಮ ಅಂಗಡಿಗೆ ಬಂದು anxint ಮಾತ್ರೆಗಳನ್ನು ಖರೀದಿ ಮಾಡಿಕೊಂಡು ಹೋದರು ಎಂದರೆ ಸರಿಯಲ್ಲ. ಆರೋಪಿಯು ನನಗೆ ಪರಿಚಯವಾಗಿದ್ದರಿಂದ, ಅವರು ಚೀಟಿ ತೋರಿಸದೇ ಇದ್ದರೂ ಸಹ ಮೌಖಿಕವಾಗಿ ಯಾವ ಮಾತ್ರೆ ಬೇಕು ಎಂದರೂ ಕೊಡುತ್ತಿದ್ದೆನು ಎಂದರೆ ಡೊಲೋ ಮಾತ್ರೆಗಳನ್ನು ಕೊಡುತ್ತಿದ್ದೆನು, anxint ಮಾತ್ರೆಗಳನ್ನು ನೀಡಿಲ್ಲ ಎಂದು ಹೇಳುತ್ತಾರೆ.

8. ನಾನು ನೀಡಿದ anxint ಮಾತ್ರೆಗಳನ್ನು ಆರೋಪಿಯು, ಪುಡಿ ಮಾಡಿ ಜಗದೀಶ ರವರ ತಾಯಿಯವರಿಗೆ ಹಾಲಿನಲ್ಲಿ ಬೆರೆಸಿ ಕುಡಿಯಲು ಕೊಟ್ಟು ಪ್ರಜ್ಞೆ ತಪ್ಪಿಸಿ ಅವರ ಮೈ ಮೇಲಿನ ಚಿನ್ನದ ಒಡವೆಗಳನ್ನು ಕಳ್ಳತನ ಮಾಡಿದ ವಿಚಾರ ನನಗೆ ಗೊತ್ತಾಯಿತು ಎಂದರೆ ಸಾಕ್ಷಿಯು, ಜನರು ಆ ರೀತಿ ಮಾತನಾಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ಆರೋಪಿಯು ನಮ್ಮ ಮೆಡಿಕಲ್ store ನಿಂದ anxint ಮಾತ್ರೆಗಳನ್ನು ಖರೀದಿ ಮಾಡಿಕೊಂಡು ಹೋಗಿ, ಜಗದೀಶ ರವರ ತಾಯಿಗೆ ಹಾಲಿನಲ್ಲಿ ಕುಡಿಯಲು ಕೊಟ್ಟು ಅವರ ಚಿನ್ನದ ಒಡವೆಗಳನ್ನು ಆರೋಪಿಯು ಕಳ್ಳತನ ಮಾಡಿದರೆಂದು ತಿಳಿಯಿತೆಂದು ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ ''ಚಂದ್ರಶೇಖರ ಅರಾಧ್ಯ ತುಂಬಾ ........................................ ನನ್ನ ಜೊತೆ ತಿಳಿಸಿದ್ದರು '' ಮತ್ತು '' ಚಂದ್ರಶೇಖರ ಅರಾಧ್ಯ .................................... ವಿಚಾರ ತಿಳಿಯಿತು'' ಎಂಬ ಭಾಗಗಳನ್ನು ಅಭಿಯೋಜಕರು ಓದಿಹೇಳಿದ್ದು, ಸದರಿ ಹೇಳಿಕೆಯ ಭಾಗಗಳನ್ನು ನಿರಾಕರಿಸಿದ್ದರಿಂದ, ಸದರಿ ಹೇಳಿಕೆಯ ಭಾಗಗಳನ್ನು ನಿಪಿ.39, 39(ಎ) ಎಂದು ಗುರುತಿಸಲಾಯಿತು.

9. ಮುದ್ದೆಮಾಲು -6 anxint ಮಾತ್ರೆ ಶೀಟ್ ಆಗಿರುತ್ತದೆ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎನ್ ಕೆ ಎಸ್ ವಕೀಲರಿಂದಃ</u>**

10. ನಾನು ಬಿ.ಎ. ತನಕ ಓದಿದ್ದೇನೆ ನನ್ನ ಮಗಳು ಫಾರ್ಮಸಿ ಓದಿರುತ್ತಾಳೆ. 6 ರಿಂದ 7 ವರುಷಗಳ ಹಿಂದೆ ನನ್ನ ಮಗಳು ಫಾರ್ಮಸಿಸ್ಟ್ ಪದವಿಯನ್ನು ಪಡೆದಿರುತ್ತಾಳೆ. ಪೊಲೀಸರು ನಮ್ಮ ಅಂಗಡಿಯ ಲೈಸೆನ್ಸ್, anxint ಮಾತ್ರೆಗಳನ್ನು ನಾವು ತಂದ ಬಗ್ಗೆ ದಾಖಲಾತಿಗಳನ್ನು ಪಡೆದಿಲ್ಲ. anxint ಮಾತ್ರೆಗಳನ್ನು prescription ಇಲ್ಲದೇ ಕೊಡುವ ಹಾಗಿಲ್ಲ ಎಂದರೆ ಸರಿ. ನನ್ನ ಮಗನಿಗೆ 24 ವರುಷ ವಯಸ್ಸಾಗಿದ್ದು ಆತ ಫಾರ್ಮಸಿ ಓದಿರುತ್ತಾನೆ. ಠಾಣೆಯಲ್ಲಿ ನಾನು ದಾಖಲಾತಿಯನ್ನು ಓದಿ ಸಹಿ ಮಾಡಿರುವುದಿಲ್ಲ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.